3

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ವಿಶ್ವವಾಣಿ    ದಿನಾಂಕ : DATE : 9-12-202

9/12/20

# ನಾಲ್ಕೇ ದಿನಕ್ಕೆ ಅಧಿವೇಶನ ಮೊಟಕು

## ಹಳ್ಳಿ ಕದನದಲ್ಲಿ ಶಾಸಕರು ಬಿಜಿ | ಗುರುವಾರಕ್ಕೆ ಸದನ ಅಂತ್ಯಗೊಳಿಸಲು ತೀರ್ಮಾನ

**ಬೆಂಗಳೂರು:** ಗ್ರಾಮ ಪಂಚಾಯಿತಿ ಚುನಾವಣಾ ಕಾವು ಹೆಚ್ಚಾಗುತ್ತಿದ್ದಂತೆ, ಇತ್ತ ಸದನವನ್ನು ಗುರುವಾರಕ್ಕೆ ಮೊಟಕುಗೊಳಿಸಲು ಕಲಾಪ ಸಲಹಾ ಸಮಿತಿಯಲ್ಲಿ ತೀರ್ಮಾನಿಸಲಾಗಿದೆ.

ಮಂಗಳವಾರ ಭೋಜನ ವಿರಾಮದ ವೇಳೆ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ಗ್ರಾಮ ಪಂಚಾಯಿತಿ ಚುನಾವಣೆ ಇರುವುದರಿಂದ, ಅಲ್ಲಿ ಸಿದ್ಧತೆ ನಡೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಆದ್ದರಿಂದ ಸದನವನ್ನು ಮೊಟಕುಗೊಳಿಸಬೇಕು ಎಂದು ಉಭಯ ಪಕ್ಷದ ನಾಯಕರ ಮೇಲೆ ಶಾಸಕರು ಒತ್ತಡ ಹೇರಿದ್ದಾರೆ. ಆದ್ದರಿಂದ ಅನಿವಾರ್ಯವಾಗಿ ಸದನವನ್ನು ಗುರುವಾರಕ್ಕೆ ಮೊಟಕುಗೊಳಿಸಲು ತೀರ್ಮಾನಿಸಲಾಗಿದೆ.

> ಶಾಸಕರು ಗ್ರಾ.ಪಂ. ಚುನಾವಣೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದ್ದರಿಂದ ಸದನ ಕಲಾಪ ಸಮಿತಿ ಸಭೆಯಲ್ಲಿ ಚರ್ಚಿಸಿ, ಗುರುವಾರ ಅಧಿವೇಶನ ಅಂತ್ಯಗೊಳಿಸಲು ತೀರ್ಮಾನಿಸಿದ್ದೇವೆ.
>
> **-ಜೆ.ಸಿ.ಮಾಧುಸ್ವಾಮಿ**
> ಸಂಸದೀಯ ವ್ಯವಹಾರಗಳ ಸಚಿವ

ಚಳಿಗಾಲದ ಅಧಿವೇಶನದ ಆರಂಭದಲ್ಲಿ ಡಿ.7 ರಿಂದ 15 ಅಂದರೆ ಏಳು ದಿನಗಳ ಕಾಲ ಅಧಿವೇಶನ ನಡೆಸಲು ತೀರ್ಮಾನಿಸಲಾಗಿತ್ತು. ಆದರೆ ಗ್ರಾಪಂ ಚುನಾವಣೆ ಗಮನದಲ್ಲಿರಿಸಿಕೊಂಡು ನಾಲ್ಕೇ ದಿನಕ್ಕೆ ಮೊಟಕುಗೊಳಿಸಲು ತೀರ್ಮಾನಿಸಲಾಗಿದೆ.

### ಇಂದಿನ ಕಲಾಪ

- ಡ್ರಗ್ಸ್ ಮುಕ್ತ ಕರ್ನಾಟಕಕ್ಕೆ ಪೊಲೀಸ್ ಕಾಯಿದೆಗೆ ತಿದ್ದುಪಡಿ ತರಲು ಸಿದ್ಧತೆ: ಬೊಮ್ಮಾಯಿ
- 3,320 ಕೋಟಿ ರು. ಪೂರಕ ಅಂದಾಜು ಪಟ್ಟಿ ಮಂಡಿಸಿದ ಸರಕಾರ
- ವಿಧಾನ ಪರಿಷತ್‌ನಲ್ಲಿ ಬಾಕಿಯಿದ್ದ ಭೂ ಸುಧಾರಣಾ ಕಾಯಿದೆ ಪಾಸ್
- ಬೆಂಬಲ ಬೆಲೆಗೆ ಸಂಬಂಧಿಸಿದಂತೆ ಸರಕಾರದ ಉತ್ತರ ವಿರೋಧಿಸಿ ಕಾಂಗ್ರೆಸ್ ಪ್ರತಿಭಟನೆ
- ಕರ್ನಾಟಕ ಸ್ಟಾಂಪ್ (2ನೇ ತಿದ್ದುಪಡಿ) ವಿಧೇಯಕ-2020 ಮಂಡನೆ
- 2ನೇ ದಿನವೂ ಕಲಾಪದತ್ತ ಸುಳಿಯದ ಶಾಸಕರು